ವಿದ್ಯಾರ್ಥಿ ನಿಲಯಕ್ಕೆ ಬಾಕಿ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ

೧೮೫೩. ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಗುರುಮಿಠಕಲ್) — ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ ರ್ಗಾದಲ್ಲಿರುವ ವಿಲಿಂದ್ ಜೂನಿಯರ್ ಕಾಲೇಜು ಮತ್ತು ಡಾ. ಅಂಬೇಡ್ಕರ್ ಡಿಗ್ರಿ ಕಾಲೇಜುಗಳಿಗೆ ವಿದ್ಯಾರ್ಥಿ ನಿಲಯದ ಅನುದಾನದ ಬಾಕಿಯನ್ನು ಬಿಡುಗಡೆ ಮಾಡುವ ಸಲುವಾಗಿ ಹಿಂದಿನ ವರ್ಷಗಳಲ್ಲಿ ಸರ್ಕಾರವು ಭರವಸೆ ಕೊಟ್ಟಿರಲಿಲ್ಲವೇ ?

ಆ) ಹಾಗಿದ್ದಲ್ಲಿ, ಅನುದಾನ ಬಿಡುಗಡೆ ಮಾಡಲು ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿದೆ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಭರವಸೆ ಕೊಟ್ಟಿತ್ತು.

ಆ) ಗುಲ್ಬರ್ಗಾದ ವಿಲಿಂದ್ ಜೂನಿಯರ್ ಕಾಲೇಜು ಮತ್ತು ಡಾ. ಅಂಬೇಡ್ಕರ್ ಡಿಗ್ರಿ ಕಾಲೇಜಿಗೆ ಕೊಡಬೇಕಾದ ಬಾಕಿ ಅನುದಾನ ಕ್ರಮವಾಗಿ ರೂ. ೪೯,೭೪೨.೦೦ ಮತ್ತು ರೂ. ೩೫,೩೫೦೦ಗಳನ್ನು ಸಂಬಂಧಪಟ್ಟ ಪ್ರಾಚಾರ್ಯರಿಗೆ ದಿನಾಂಕ ೧೦–೫–೮೮ರಂದು ಮಂಜೂರು ಮಾಡಲಾಗಿದೆ.

ಅಧ್ಯಕ್ಷರು.—ಇಂದಿನ ಸಭೆಯನ್ನು ಸೋಮವಾರ ಬೆಳಿಗ್ಗೆ ೧೧ ಘಂಟೆಗೆ ಮುಂದೂಡಲಾಗಿದೆ.

ಸದನವು ಮಧ್ಯಾಹ್ನ ೩ ಗಂಟೆ ೬ ನಿಮಿಷಕ್ಕೆ ಮುಕ್ತಾಯವಾಗಿ, ಮತ್ತೆ ೬ನೇ ಜೂನ್ ೧೯೮೮ನೇ ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಿತು.